**CC 1207/2017**
**PW.5**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**

**ಸಿ ಸಿ ನಂ : 1207/2017**

**ಪಿ ಡಬ್ಲ್ಯೂ -05**

**ಸಿ ಡಬ್ಲ್ಯೂ-07**

**ದಿಃ 22.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ರಾಮಚಂದ್ರಪ್ಪ**
**ತಂದೆಯ ಹೆಸರು ಃ ಲೇಟ್ ತಿಮ್ಮಣ್ಣ**
**ವಯಸ್ಸು ಃ 65 ವರ್ಷ**
**ಉದ್ಯೋಗ ಃ ನಿವೃತ್ತ ಎಸ್.ಐ**
**ವಿಳಾಸ ಃ ತುಮಕೂರು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದಃ**

ನಾನು ಜುಲೈ 2013 ರಿಂದ ಆಗಸ್ಟ್ 2018 ರವರೆಗೂ ನಾನು ದೊಡ್ಡಬೆಳವಂಗಲ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 05.12.2015 ರಂದು ನಾನು ಠಾಣೆಯ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ನಂ. 299/2015 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು ಹಾಗೂ ಪ್ರತಿಯನ್ನು ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು. ಸಾಕ್ಷಿಯು ಪ್ರ.ವ.ವರದಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪ್ರ.ವ.ವರದಿಯನ್ನು ನಿಪಿ-5 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-6 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಸಂಜೆ 4-30 ರಿಂದ 5-00 ಗಂಟೆಯವರೆಗೂ ಘಟನಾ ಸ್ಥಳದ ಪಂಚನಾಮೆಯನ್ನು ನಿಪಿ-1 ರಂತೆ ಜರುಗಿಸಿರುತ್ತೇನೆ. ನಿಪಿ-1 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಅದೇ ಸಂದರ್ಭದಲ್ಲಿ ಕೆಎ-25-ಎಎ-1139 ವಾಹನವನ್ನು ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಮೃತ ಹಸುವನ್ನು ಮರಣೋತ್ತರ ಪರೀಕ್ಷೆಗಾಗಿ ದೊಡ್ಡಬೆಳವಂಗಲ ಪಶು ಚಿಕಿತ್ಸಾಲಯಕ್ಕೆ ಕಳುಹಿಸಿಕೊಟ್ಟೆನು. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-8 ರವರಿಗೆ ಹಸ್ತಾಂತರಿಸಿದೆನು

**<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ.ಜಿ.ಜಿ., ವಕೀಲರಿಂದ**

ಚಾಸಾ-1 ದೂರನ್ನು ದಾಖಲಿಸುವ ಪೂರ್ವದಲ್ಲಿ ಘಟನೆಯ ಬಗ್ಗೆ ಮಾಹಿತಿ ಇರಲಿಲ್ಲ. ನಿಪಿ-6 ದೂರನ್ನು ಚಾಸಾ-1 ರವರು ಬರೆದುಕೊಂಡು ಠಾಣೆಗೆ ತಂದಿದ್ದರು. ದೂರನ್ನು ದಾಖಲಿಸಲು ಚಾಸಾ-1 ರವರು ಖುದ್ದಾಗಿ ಹಾಜರಾಗಿದ್ದರು. ನಿಪಿ-5 ರ ಕಾಲಂ 12 ರಲ್ಲಿ ಪಿರ್ಯಾದಿಯ ಸಹಿ ಇಲ್ಲ ಎಂದರೆ ಸರಿ. ದೂರನ್ನು ದಾಖಲಿಸಲು ಠಾಣೆಗೆ ಹಾಜರಾಗಿರಲಿಲ್ಲ ಆದ್ದರಿಂದ ಕಾಲಂ 12 ರಲ್ಲಿ ಪಿರ್ಯಾದಿಯ ಸಹಿ ಇಲ್ಲ ಎಂದರೆ ಸರಿಯಲ್ಲ. ಪಂಚರಿಗೆ ಲಿಖಿತ ನೋಟೀಸ್ ಕೊಟ್ಟಿರಲಿಲ್ಲ. ಪಂಚನಾಮೆಯ ಸಂದರ್ಭದಲ್ಲಿ ಫೋಟೋ ತೆಗೆದುಕೊಂಡಿಲ್ಲ. ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಮಾಡದೇ ಇದ್ದ ಕಾರಣ ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಘಟನಾ ಸ್ಥಳಕ್ಕೆ ಹೋಗದೇ ಪ್ರಕರಣಕ್ಕೆ ಪೂರಕವಾಗಿ ಠಾಣೆಯಲ್ಲಿ ಕುಳಿತು ಪಂಚನಾಮೆಯನ್ನು ಬರೆದಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಕುಳಿತು ಪಂಚನಾಮೆಯನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಸಂಖ್ಯೆಗಾಗಿ ಸುಳ್ಳು ದೂರನ್ನು ದಾಖಲಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**